ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ; ಜಂ.ನಿ(ಆಡಳಿತ) ಖಾಯಂ.ಪೂ.ಸೇ.ಘೋ/1/2021-22 ದಿನಾಂಕ:31/03/2022

: ಜ್ಞಾಪನ :

ವಿಷಯ:- ರಾಜ್ಯದ ಎಲ್ಲಾ "ಸಿ' ದರ್ಜೆಯ ನೌಕರರ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿಯ ಕುರಿತು ಲಿಖಿತ ಪರೀಕ್ಷೆಯ ಆಧಾರದ ಮೇಲೆ ಖಾಯಂ ಪೂರ್ವ ಸೇವಾವಧಿ ಘೋಷಿಸುವ ಕುರಿತು.

ಉಲ್ಲೇಖ:- 1.ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ5(7) ಖಾ.ಪೋ.ಸೇ.ಘೋ.ಕು:2021-22 ದಿನಾಂಕ:04-01-2022.
2.ಈ ಕಛೇರಿ ಜ್ಞಾಪನ ಸಂಖ್ಯೆ; ಜಂ.ನಿ(ಆಡಳಿತ) ಖಾಯಂ. ಪೂ.ಸೇ. ಘೋ/1/2021-22 . ದಿನಾಂಕ:07/02/2022
3. ವಿಭಾಗೀಯ ಸಹ ನಿರ್ದೇಶಕರುಗಳು ಸಲ್ಲಿಸಿರುವ ವರದಿ.

@@@@@

ವಿಷಯಕ್ಕೆ ಸಂಬಂಧಿಸಿದಂತೆ., ಉಲ್ಲೇಖಿತ-(1) ರ ಈ ಕಛೇರಿ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಬೋಧಕೇತರ ವೃಂದದ ಗ್ರೂಪ್ "ಸಿ" ನೌಕರರ ಖಾಯಂ ಪೂರ್ವ ಸೇವಾ ಅವಧಿ ಘೋಷಣೆ ಮಾಡುವ ಕುರಿತಂತೆ, ಕಡ್ಡಾಯವಾಗಿ ವೃತ್ತಿ ಬುನಾದಿ ಹಾಗೂ ಇತರೆ ತರಬೇತಿಗಳಿಗೆ ನಿಯೋಜಿಸುವುದು ಹಾಗೂ ನಿಯಮಾನುಸಾರ ಎಲ್ಲಾ ಇಲಾಖಾ ಪರೀಕ್ಷೆಗಳನ್ನು ಉತ್ತೀರ್ಣರಾದ ನೌಕರರಿಗೆ ಕಾರ್ಯಕ್ಷಮತೆ ಹಾಗೂ ವಿಷಯ ಪರಿಣಿತಿ ಕುರಿತು ವಿಭಾಗ ಮಟ್ಟದ ಜಂಟಿ ನಿರ್ದೇಶಕರುಗಳು ಪ್ರತಿ ಮಾಹೆ 100 ಅಂಕಗಳಿಗೆ ಪರೀಕ್ಷೆಯನ್ನು ನಡೆಸಬೇಕು ಮತ್ತು ಫಲಿತಾಂಶವನ್ನು ಖಾಯಂ ಪೂರ್ವ ಸೇವಾವಧಿ ಘೋಷಣೆ ಮಾಡುವ ಪ್ರಾಧಿಕಾರಕ್ಕೆ ಕಳುಹಿಸುವುದು. ಆಡಳಿತಾತ್ಮಕ ಹಿತದೃಷ್ಟಿಯಿಂದ ಮೇಲಿನ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಪಾಲಿಸುವುದು ಎಂದು ತಿಳಿಸಲಾಗಿತ್ತು.

ಉಲ್ಲೇಖ-02ರ ಈ ಕಛೇರಿ ಜ್ಞಾಪನದಲ್ಲಿ ಪಠ್ಯವಸ್ತು ನಿಗಧಿಪಡಿಸಿ 100 ಅಂಕಗಳಿಗೆ ಪ್ರಶ್ನೆ ಪತ್ರಿಕೆಯನ್ನು ತಮ್ಮ ವ್ಯಾಪ್ತಿಯ ಡಯಟ್ ಅಥವಾ ಜಿಲ್ಲಾ ತರಬೇತಿ ಸಂಸ್ಥೆಯಿಂದ ಸಿದ್ದಪಡಿಸಿಕೊಂಡು ಪ್ರತಿ ಮಾಹೆಯಲ್ಲಿ ಪರೀಕ್ಷೆ ನಡೆಸಲು ನಿಯಮಾನುಸಾರ ಕ್ರಮ ವಹಿಸಲು ತಿಳಿಸಲಾಗಿತ್ತು. ಅದರಂತೆ ಉಲ್ಲೇಖ-3ರಲ್ಲಿ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳು ಸುತ್ತೋಲೆಯಂತೆ ಪರೀಕ್ಷೆ ನಡೆಸಿ ಈ ಕಛೇರಿಗೆ ವರದಿ ಸಲ್ಲಿಸಿರುವುದನ್ನು ಪರಿಶೀಲಿಸಿದೆ.

ಈ ಹಿನ್ನೆಲೆಯಲ್ಲಿ ಖಾಯಂ ಪೂರ್ವ ಸೇವಾ ಅವಧಿಯಲ್ಲಿರುವ ಎಲ್ಲಾ "ಸಿ" ವೃಂದದ ಬೋಧಕೇತರ ನೌಕರರುಗಳ (ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣ ಹಾಗೂ ಅನುತ್ತೀರ್ಣರಾದ ನೌಕರರು ಸೇರಿದಂತೆ) ಕಾರ್ಯ ಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ ನಿರಂತರ ಮೌಲ್ಯಮಾಪನದ ಅವಶ್ಯಕತೆ ಇರುತ್ತದೆ. ಪ್ರಯುಕ್ತ ಉಲ್ಲೇಖ-01 ರ ಸುತ್ತೋಲೆಯಂತೆ ಲಿಖಿತ ಪರೀಕ್ಷೆಯನ್ನು ಕಡ್ಡಾಯವಾಗಿ ಪ್ರತಿ ಮಾಹೆಯಲ್ಲಿ ನಡೆಸಿ ನೌಕರರುಗಳ ಕಾರ್ಯಕ್ಷಮತೆ/ ಕೌಶಲ್ಯತೆ ವೃದ್ಧಿಸಿರುವ ಕುರಿತು ಕಛೇರಿ ಮುಖ್ಯಸ್ಥರು ಪರಿಶೀಲಿಸುವುದು. ಅದರ ಆಧಾರದ ಮೇಲೆ ಎರಡು ವರ್ಷಗಳ ಸೇವಾ ಅವಧಿಯನ್ನು ಪೂರ್ಣಗೊಳಿಸಿರುವ ನೌಕರರುಗಳು ಲಿಖಿತ ಕಾರ್ಯಕ್ಷಮತೆ ಪರೀಕ್ಷೆಯಲ್ಲಿ ಉತ್ತೀರ್ಣರಾದ ಫಲಿತಾಂಶದ ವರದಿ ಹಾಗೂ ನಿಗಧಿತ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣತೆ ಹೊಂದಿರುವುದನ್ನು ಖಚಿತಪಡಿಸಿಕೊಂಡು ಖಾಯಂ ಪೂರ್ವ ಸೇವಾ ಅವಧಿ ಘೋಷಣೆಗಾಗಿ ಮಾನ್ಯ ಆಯುಕ್ತರ ಸಹಮತಿಗಾಗಿ ಅರ್ಹ ಪ್ರಸ್ತಾವನೆಗಳನ್ನು ಸಲ್ಲಿಸಲು ತಿಳಿಸಿದೆ.

ಡಾ.ವಿಶಾಲ್.ಆರ್.,ಭಾ.ಆ.ಸೇ
ಆಯುಕ್ತರು.

ಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು. ರವರಿಗೆ ಗೌರವಗಳೊಂದಿಗೆ.
2. ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.

3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರು, ರವರಿಗೆ ನಿಯಮಾನುಸಾರ ಅಗತ್ಯ ಕ್ರಮಕ್ಕಾಗಿ.
4. ಸಹ ನಿರ್ದೇಶಕರು (ಕಾರ್ಯಕ್ರಮ ) ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಬೆಂಗಳೂರು ವಿಭಾಗದ ಪರೀಕ್ಷಾ ಪ್ರಾಧಿಕಾರಿಗಳು.
5. ರಾಜ್ಯದ ಎಲ್ಲಾ ಉಪನಿರ್ದೇಶಕರ (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ನಿಯಮಾನುಸಾರ ಕ್ರಮವಹಿಸಲು ತಿಳಿಸಿದೆ.
6. ಕಛೇರಿ ಪ್ರತಿ.